ಶ್ರೀ ಆರ್.ವಿ. ದೇಶಪಾಂಡೆ : ನಾವು ಜಮೀನ್ದಾರರಾಗಿದ್ದುದು ನಿಜ. ಜಮೀನೆಲ್ಲಾ ಹೋಗಿ ಈಗ ದಾರ ಮಾತ್ರ ಉಳಿದಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಫಿಟ್‌ನೆಸ್ ಸರ್ಟಿಫಿಕೇಟ್ ಕೊಡಲಿಕ್ಕೆ ಸಬ್ ಡಿವಿಜನ್ ಮಟ್ಟದಲ್ಲಿ ಅವಕಾಶ ಇದ್ದರೆ ಎಕ್ಸಾಮಿನ್ ಮಾಡುತ್ತೇನೆಂದು ಹೇಳಿದ್ದಾರೆ. ಬಹುಶಃ ಇದು ನಿಮಗೆ ಗೊತ್ತಿಲ್ಲ. Camps are conducted in every taluka. ಹಿಂದೆ ನಾನು ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಆಗಿದ್ದಾಗ ಒಂದು ಸಣ್ಣ ಫೈಲನ್ನು ಬಿಲ್ಡ್-ಅಪ್ ಮಾಡಿಸಿದ್ದೆ. ಒಂದು ಪ್ರಪೋಸಲ್ ಕೂಡಾ ಬಂದಿತ್ತು. ರೈತ ಸಂಘದವರು ಪ್ರಪೋಸಲ್ ಮಾಡಿದ್ದರು. ಪವರ್ ಟ್ರ್ಯಾಕ್ಟರ್ ಮತ್ತು ಪವರ್ ಟ್ರೈಲರ್‌ಗಳಿಗೆ ಫಿಟ್‌ನೆಸ್ ಸರ್ಟಿಫಿಕೇಟ್ ಬೇಕಾಗಿಲ್ಲ. ಅದನ್ನು ಉಪಯೋಗಿಸಿಕೊಳ್ಳುವುದಕ್ಕೆ ಆಗದೇ ಹೋದರೆ ರೈತರೇ ಅದನ್ನು ಬಿಸಾಕಿ ಬಿಡುತ್ತಾರೆ. ಕ್ಯಾನ್ಸೆಲ್‌ನಿಂದ ಏನಾಗುತ್ತದೆಂದರೆ ಕಲೆಕ್ಷನ್ ಅನುಕೂಲವಾಗುತ್ತದೆ. ಆದ್ದರಿಂದ, ಫಿಟ್‌ನೆಸ್ ಸರ್ಟಿಫಿಕೇಟ್ ಏಕೆ ಕ್ಯಾನ್ಸಲ್ ಮಾಡಬಾರದು ಎಂದು ಕೇಳುತ್ತಿದ್ದೇನೆ.

SRI AZIZ SAIT : I will get it examind. I am not here to harass the ryots. If I could help the ryots, I will be the firstman to take the credit myself and I will never allow you to take that credit.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಾರಿಗೆ ಮಂತ್ರಿಗಳು ಕೊಟ್ಟಿರುವಂಥ ತೆರಿಗೆ ಪಟ್ಟಿಯನ್ನು ನೋಡಿದ ಮೇಲೆ ಅವರಿಗೆ ನಾನು ಒಂದು ಪ್ರಶ್ನೆ ಹಾಕಬೇಕು. ಎತ್ತಿನಗಾಡಿ ಏತಕ್ಕೆ ನಿಮ್ಮ ಕಣ್ಣಿಗೆ ಬಿದ್ದಿಲ್ಲ. ತಾವು ಎತ್ತಿನಗಾಡಿಗೆ, ಚಕ್ಕಡಿಗೆ ತೆರಿಗೆ ಹಾಕುವ ಮನಸ್ಸು ಏಕೆ ಮಾಡಿಲ್ಲ. ಇದನ್ನು ತಾವು ವಿಶ್ಲೇಷಣೆ ಮಾಡುತ್ತೀರಿ. Tractor power tillers ಅನ್ನು ಟ್ರಾನ್ಸ್‌ಪೋರ್ಟ್ ವೆಹಿಕಲ್ಸ್ ಎಂದು ವಿಶ್ಲೇಷಣೆ ಮಾಡುತ್ತೀರಿ. They are not transport vehicles. They are agricultural implements. They are tools of production. ಅವುಗಳ ಮೇಲೆ ತೆರಿಗೆಯನ್ನು ಹಾಕುತ್ತಿದ್ದೀರಿ. ಇದು ಎತ್ತಿನಗಾಡಿ ಮೇಲೆ ತೆರಿಗೆ ಹಾಕಿದಷ್ಟೇ ಅವಿವೇಕತನ, ಅವೈಜ್ಞಾನಿಕ ದಯವಿಟ್ಟು ಇದನ್ನು ಕೈಬಿಡುತ್ತೇವೆಂದು ರಾಜ್ಯದ ರೈತರಿಗೆ ಭರವಸೆ ಕೊಡಬೇಕು.

SRI AZEEZ SAIT : I fully endorse the views of my learned friend and colleague of socialist party at that time. The anxiety what he is having I could very well understand. ಎತ್ತಿನಗಾಡಿ ಟ್ಯಾಕ್ಸ್ ಹಾಕಿ ಎಂದು ನಾವು ಹೇಳುವುದಿಲ್ಲ. ಆಕ್ಸಿಡೆಂಟ್ ಅವಾಯ್ಡ್ ಮಾಡಲಿಕ್ಕೆ ಒಂದು ದೀಪ ಹಾಕಿಕೊಳ್ಳಬೇಕು. ದೀಪ ಇಟ್ಟುಕೊಂಡರೆ ಆಕ್ಸಿಡೆಂಟ್ ಆಗುವುದಿಲ್ಲ. ಪವರ್ ಟಿಲ್ಲರ್‌ಗೆ, ಫಿಟ್‌ನೆಸ್ ಸರ್ಟಿಫಿಕೇಟ್ ಆಗಲಿ, ಟ್ಯಾಕ್ಸ್ ಆಗಲಿ, ಇದು ಅಗ್ರಿಕಲ್ಚರಲ್ ಇಂಪ್ಲಿಮೆಂಟ್ I do agree that it is advanced agricultural implement. It could be treated like that. I share and I assure the hon.Members in this House that I will examine it and if there is any scope for it, I will be the first man to do it and take that credit to myself, ಎಂದು ಹೇಳಿದೆ.

**ಪ್ರೌಢಶಾಲಾ ಶಿಕ್ಷಕರಿಗೆ ಬಡ್ತಿ ನೀಡುವುದು.**

116 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

*ಅ) ರಾಜ್ಯದಲ್ಲಿರುವ ಪ್ರೌಢಶಾಲೆಗಳಲ್ಲಿ ಒಟ್ಟು ವಿಶೇಷ ಶಿಕ್ಷಕರುಗಳ ಸಂಖ್ಯೆ ಎಷ್ಟು ?*

*ಆ) ಸದರೀ ಶಿಕ್ಷಕರು ಯಾವ ಯಾವ ವಿಷಯಗಳಲ್ಲಿ ಪರಿಣಿತಿ ಹೊಂದಿರುತ್ತಾರೆ.*

*ಇ) ಸದರೀ ಶಿಕ್ಷಕರುಗಳಲ್ಲಿ ಎಷ್ಟು ಶಿಕ್ಷಕರುಗಳು ಸಹ ಶಿಕ್ಷಕರಾಗಿ ಬಡ್ತಿ ಪಡೆಯಲು ಅರ್ಹರಾಗಿರುತ್ತಾರೆ. ಇದುವರೆವಿಗೂ ಅರ್ಹರಾಗಿರುವ ಶಿಕ್ಷಕರುಗಳಿಗೆ ಬಡ್ತಿ ನೀಡದಿರಲು ಕಾರಣವೇನು?*

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಸಚಿವರು) :

ಅ) 3921.

ಆ) 1. ದೈಹಿಕ 2. ಹೊಲಿಗೆ, ತೋಟಗಾರಿಕೆ ಮರಗೆಲಸ 3. ಚಿತ್ರಕಲಾ 4. ನೃತ್ಯ ನಾಟಕ ಮತ್ತು ಸಂಗೀತ.

ಇ) ಹುದ್ದೆ ಮತ್ತು ನೇಮಕಾತಿ ನಿಯಮದಲ್ಲಿ ವಿಶೇಷ ಶಿಕ್ಷಕರಿಗೆ ಸಹ ಶಿಕ್ಷಕರಾಗಿ ಮುಂಬಡ್ತಿ ನೀಡಲು ಅವಕಾಶ ಇರುವುದಿಲ್ಲ.

ಶ್ರೀಮತಿ ಮೋಟಮ್ಮ : ಅಧ್ಯಕ್ಷರೆ, ನನ್ನ ಮೊದಲನೆಯ ಪ್ರಶ್ನೆಯಲ್ಲಿ ರಾಜ್ಯದಲ್ಲಿರುವ ಪ್ರೌಢಶಾಲೆಗಳಲ್ಲಿ ಒಟ್ಟು ವಿಶೇಷ ಶಿಕ್ಷಕರುಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ 3921 ಎಂದು ಮಾನ್ಯ ಶಿಕ್ಷಣ ಸಚಿವರು ಉತ್ತರ ಹೇಳಿದ್ದಾರೆ, ಎರಡನೆಯ ಪ್ರಶ್ನೆಯಲ್ಲಿ ಸದರಿ ಶಿಕ್ಷಕರು ಯಾವ ಯಾವ ವಿಷಯಗಳಲ್ಲಿ ಪರಿಣತಿ ಹೊಂದಿರುತ್ತಾರೆ ಎಂದು ಕೇಳಿದ್ದಕ್ಕೆ ಉತ್ತರ. ದೈಹಿಕ, ಹೊಲಿಗೆ, ತೋಟಗಾರಿಕೆ, ಮರಗೆಲಸ, ಚಿತ್ರಕಲಾ, ನೃತ್ಯ, ನಾಟಕ ಮತ್ತು ಸಂಗೀತ ಎಂದು ಹೇಳಿದ್ದಾರೆ. ಇನ್ನು ಕೊನೆಯ ಪ್ರಶ್ನೆಯಲ್ಲಿ ಸದರಿ ಶಿಕ್ಷಕರುಗಳಲ್ಲಿ ಸಹ ಶಿಕ್ಷಕರಾಗಿ ಬಡ್ತಿ ಪಡೆಯಲು ಅರ್ಹರಾಗಿರುತ್ತಾರೆ. ಇದುವರೆವಿಗೂ ಅರ್ಹರಾಗಿರುವ ಶಿಕ್ಷಕರುಗಳಿಗೆ ಬಡ್ತಿ ನೀಡದಿರಲು ಕಾರಣವೇನು ಎಂದು ಕೇಳಿದ್ದಕ್ಕೆ ಹುದ್ದೆ ಮತ್ತು ನೇಮಕಾತಿ ನಿಯಮದಲ್ಲಿ ವಿಶೇಷ ಶಿಕ್ಷಕರಿಗೆ ಸಹ ಶಿಕ್ಷಕರಾಗಿ ಮುಂಬಡ್ತಿ ನೀಡಲು ಅವಕಾಶ ಇರುವುದಿಲ್ಲ ಎಂದು ಹೇಳಿದ್ದಾರೆ. ಹಾಗಾದರೆ, ಇವರು ಅಪಾಯಿಂಟ್‌ಮೆಂಟ್‌ಗೆ ಕ್ರಾಫ್ಟ್ ಟೀಚರ್ ಆಗಿ, ಫಿಸಿಕಲ್ ಎಜುಕೇಷನ್ ಟೀಚರ್ ಆಗಿ ಸೇರಿದವರು ಹಾಗೆಯೇ ರಿಟೈರ್ ಆಗಬೇಕಾಗುತ್ತದೆ. ಇವರಲ್ಲಿ ಕೆಲವರು ಬಿ.ಎಡ್. ಮಾಡಿದವರು ಇರುತ್ತಾರೆ. ಇವರಿಗೆ ಪ್ರಮೋಷನ್ ವಿತಕ್ಕೆ ಕೊಡಬಾರದು? ಒಂದುವೇಳೆ ಹಾಗೆ ಪ್ರಮೋಷನ್ ಸಾಧ್ಯವಿಲ್ಲದೇ ಇದ್ದಾಗ ಆ ಹುದ್ದೆಯನ್ನೇ ಏಕೆ ಅಪ್‌ಗ್ರೇಡ್ ಮಾಡಬಾರದು? ಈ ರೀತಿ ಮಾಡಿದರೆ ಅವರಿಗೆ ಹೆಚ್ಚಿನ ಸಹಾಯವಾಗುತ್ತದೆ ಎನ್ನುವುದು ನನ್ನ ಪ್ರಶ್ನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಇರತಕ್ಕ ನೇಮಕಾತಿ ನಿಯಮಗಳಲ್ಲಿ ಸಹ ಶಿಕ್ಷಕರು ಆಗಲಿಕ್ಕೆ ಶಿಕ್ಷಕರಾಗಿ ಮುಂಬಡ್ತಿ ಅವಕಾಶ ಇರುವುದಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ವಿಶೇಷ ಶಿಕ್ಷಕರು ಯಾರು ಇದ್ದಾರೆ ಅವರು ಅಮೇಲೆ ಅವರಿಗೆ ಬೇಕಾದಂಥ ಅರ್ಹತೆಗಳನ್ನು ಪಡೆದಿದ್ದರೆ, ಅವರಿಗೆ ವಿತಕ್ಕೆ ಮುಂಬಡ್ತಿ ಕೊಡಬಾರದು ಎಂದು ಪ್ರಶ್ನೆ ಕೇಳಿದಿರಿ. ಅದು ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೆ ಎನ್ನುವುದನ್ನು ನಾವು ಸರ್ಕಾರ ಪರಿಶೀಲನೆ ಮಾಡುತ್ತೇವೆ. ಈಗಾಗಲೇ 15 ವರ್ಷ ಆದಮೇಲೆ ಒಂದು ಮುಂಬಡ್ತಿ ಕೊಡಬೇಕೆಂದು ಮೊನ್ನೆತಾನೆ ನಾವು ನಿರ್ಣಯ ತೆಗೆದುಕೊಂಡಿದ್ದೇವೆ. ಅದರ ಪ್ರಕಾರ ಇವರಿಗೂ ಕೂಡ ಅನ್ವಯವಾಗುತ್ತದೆ. ಇನ್ನು ವಿಶೇಷವಾಗಿ ಕೊಡತಕ್ಕಂಥ ಮುಂಬಡ್ತಿಯಲ್ಲಿ ಈಗಿನ ನೇಮಕಾತಿಗೆ ಅವಕಾಶ ಇಲ್ಲ. ಅರ್ಹತೆಯನ್ನು ಆಮೇಲೆ ಪಡೆದುಕೊಂಡರೆ ಆಮೇಲೆ ಮುಂಬಡ್ತಿ ಕೊಡತಕ್ಕಂಥ ವಿಚಾರದಲ್ಲಿ ಸರ್ಕಾರ ಪರಿಶೀಲನೆ ಮಾಡುತ್ತದೆ.

**ತುಮಕೂರಿನಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದ ಶಾಖೆಯೊಂದನ್ನು ತೆರೆಯುವುದು**

282 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) :ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?